ದಿನಾಂಕ 21-4-2017 ರಂದು ಮಧ್ಯಾಹ್ನ 2.00 ಗಂಟೆಗೆ ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಮೂವತ್ತನೇಯ ಸಭೆಯ (ತುರ್ತು ಸಭೆಯ) ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್ | ಸದಸ್ಯರು |
| 3. | ಡಾ. ಎಂ. ಶೇಖರಗೌಡ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ | ಸದಸ್ಯರು |
| 8. | ಶ್ರೀ ಕೆ. ಮುರಳೀಧರ | ಸದಸ್ಯರು |
| 9. | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |
| 10. | ಶ್ರೀಮತಿ ಜ್ಯೋತಿ | ವಿಶೇಷ ಆಹ್ವಾನಿತರು |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮೂವತ್ತನೇಯ ಸಭೆಗೆ (ತುರ್ತು ಸಭೆಗೆ) ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ-1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2016-2017 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2017-2018 ನೇ ಸಾಲಿನ ಆಯವ್ಯಯ ಅಂದಾಜು ಕುರಿತು**<br><br>**ಠರಾವು:**<br><br>ವಿವರವಾದ ಚರ್ಚೆಯ ನಂತರ, 2016-2017 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2017-2018 ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡಲಾಯಿತು. ಅನುದಾನವನ್ನು ವಿಶೇಷವಾಗಿ ಸಂಶೋಧನಾ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲು ತಿಳಿಸಿ ಸಂಶೋಧನಾ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳ ಕಾಮಗಾರಿಗಳನ್ನು ಒಟ್ಟು ಕ್ಷೇತ್ರದ ಶೇಕಡ 10% ಕ್ಕೆ ಸೀಮಿತಿಗೊಳಿಸುವಂತೆ ಸರಕಾರದ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು.<br><br>**(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿ / ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ-2 | **ಡಾ. ಬಿ.ವಿ. ಪಾಟೀಲ, ಮಾಜಿ ಕುಲಪತಿಗಳು ಹಾಗೂ ನಿವೃತ್ತ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಇವರ ವಿರುದ್ಧ ವಿವಿಧ ಸಂಘಗಳವರು / ವ್ಯಕ್ತಿಗಳು ಮಾಡಲಾಗಿರುವ ಆರೋಪಗಳ ಕುರಿತು ವಿಚಾರಿಸಲು ಸಮಿತಿಯನ್ನು ರಚಿಸುವ ಕುರಿತು**<br><br>**ಠರಾವು:**<br><br>ಚರ್ಚೆಯ ನಂತರ, ಸದರಿ ವಿಷಯದ ಕುರಿತು ಪ್ರತಿಯೊಂದು ಅಂಶವಾರು ಬಗ್ಗೆ ಕೈಗೊಂಡ ಕ್ರಮಗಳನ್ನು ತಿಳಿಸಲು ಹಾಗೂ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಅಂಶಗಳ ಬಗ್ಗೆ ನುರಿತ ನ್ಯಾಯವಾದಿಗಳವರಿಂದ ಕಾನೂನು ಸಲಹೆ ಪಡೆದು ಸರಕಾರಕ್ಕೆ ವರದಿ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br><br>**(ಕ್ರಮ: ಕುಲಸಚಿವರು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ-1 | **ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಅನುಮೋದನೆ ಕುರಿತು** |

ಠರಾವು:

ವಿಸ್ತೃತವಾದ ಚರ್ಚೆಯ ನಂತರ, ಮಾನ್ಯ ರಾಜ್ಯಪಾಲರ ಅನುಮೋದನೆ ದೊರೆತ ನಂತರ ಡಾ. ಆರ್.ಎಸ್. ಪರೋಡ, ಚೇರ್‌ಮನ್, ಟ್ರಸ್ಟ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಅಗ್ರಿಕಲ್ಚರಲ್ ಸೈನ್ಸಸ್ (ಟಿ.ಎ.ಎ.ಎಸ್.), ನವದೆಹಲಿ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಕೃಷಿ ಸಂಶೋಧನೆಯ ಅಭಿವೃದ್ಧಿಗಾಗಿ ವಿಶಿಷ್ಟ ಸಾಧನೆಗೈದ ಹಾಗೂ ಹೈದ್ರಾಬಾದ್–ಕರ್ನಾಟಕದವರಾದ ಡಾ. ಎಸ್.ಎ. ಪಾಟೀಲ್ ಅವರ ಹೆಸರನ್ನು ಸೇರಿಸಲು ಸಲಹೆ ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಅವರು ಸಲಹೆ ನೀಡಿದರು. ಅಲ್ಲದೆ, ಪ್ರಗತಿಪರ ರೈತರಾದ ಶ್ರೀ ರುದ್ರನಗೌಡ ತಾವರಗೇರಾ ಅವರ ಹೆಸರನ್ನು ಸಹ ಗೌರವ ಡಾಕ್ಟರೇಟ್ ಪದವಿಗಾಗಿ ಪರಿಗಣಿಸಲು ಸಲಹೆ ನೀಡಿದರು.

(ಕ್ರಮ: ಕುಲಸಚಿವರು)

**ಐಟಂ–2** **ಕೃವಿವಿ ರಾಯಚೂರಿನಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಹೆಚ್ಚುವರಿಯಾಗಿ ಮೂರು ತಿಂಗಳುಗಳ ಕಾಲಾವಕಾಶಕ್ಕಾಗಿ ಅನುಮೋದನೆ ಕುರಿತು**

ಠರಾವು:

ದೀರ್ಘ ಚರ್ಚೆಯ ನಂತರ, ಜಾಹಿರಾತು ಸಂ. R/UASR/Rectt./ Advt.10/2884/2015 ದಿನಾಂಕ 4-11-2015, No. R/UASR/Rectt./Advt.11/3604 /2015-16, ದಿನಾಂಕ 9-1-2016, No. R/UASR/Rectt./Advt.11/55/2016, ದಿನಾಂಕ 11-1-2016, No. R/UASR/Rectt./Advt.11/55/ 2016, ದಿನಾಂಕ 11-4-2016, No. R/UASR/Rectt./Advt.12/56/2016, ದಿನಾಂಕ 11-4-2016 and No. R/UASR/ Rectt./Advt.13/1541/2016-17, ದಿನಾಂಕ 1-8-2016 ರ ಪ್ರಕಾರ ಜಾಹೀರಾತುಪಡಿಸಿ ಅಂತಿಮ ದಿನಾಂಕ ನಿಗದಿಪಡಿಸಿದಾಗಿನಿಂದ ಅನುಕ್ರಮವಾಗಿ 18 ತಿಂಗಳುಗಳು ಮುಗಿದ ನಂತರ ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ಮೂರು ತಿಂಗಳುಗಳ ಕಾಲಾವಕಾಶ ನೀಡಿ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು)

**ಐಟಂ–3** **ಕೃಷಿ ವಿಜ್ಞಾನ ಕೇಂದ್ರಗಳ ತರಬೇತುದಾರರರಿಗಾಗಿ ವಿಸ್ತರಣಾ ಚಟುವಟಿಕೆಗಳಿಗೆ ಭೋಜನಾ ವೆಚ್ಚವನ್ನು ಹೆಚ್ಚಿಸಿ ಪರಿಷ್ಕರಿಸಲು ಅನುಮೋದನೆ ಕುರಿತು**

ಠರಾವು:

ಚರ್ಚೆಯ ನಂತರ, ಕೃಷಿ ವಿಜ್ಞಾನ ಕೇಂದ್ರಗಳ ತರಬೇತುದಾರರರಿಗಾಗಿ ವಿಸ್ತರಣಾ ಚಟುವಟಿಕೆಗಳಿಗೆ ಭೋಜನಾ ವೆಚ್ಚವನ್ನು ದಿನಾಂಕ 1–4–2017 ರಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ಹೆಚ್ಚಿಸಿ ಪರಿಷ್ಕರಿಸಲು ಘನ ವೇದಿಕೆಯು ಅನುಮೋದನೆ ನೀಡಿತು

| ವಿವರ | ಪ್ರಸ್ತುತ ದರ (ರೂ.) | ಪರೀಷ್ಕೃತ ದರ (ರೂ.) |
|---|---|---|
| ಕೃವಿವಿ ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರದ ತರಬೇತುದಾರರಿಗಾಗಿ ಭೋಜನಾ ವೆಚ್ಚ | ರೂ. 75/– ಪ್ರತಿದಿನ ಪ್ರತಿ ವಾಸ್ತವ್ಯದಾರ–ತರಬೇತುದಾರರಿಗೆ | ರೂ. 150/– ಪ್ರತಿದಿನ ಪ್ರತಿ ವಾಸ್ತವ್ಯದಾರ–ತರಬೇತುದಾರರಿಗೆ |
| | ರೂ. 40/– ಪ್ರತಿದಿನ ಪ್ರತಿ ವಾಸ್ತವ್ಯರಹಿತ–ತರಬೇತುದಾರರಿಗೆ | ರೂ. 80/– ಪ್ರತಿದಿನ ಪ್ರತಿ ವಾಸ್ತವ್ಯರಹಿತ–ತರಬೇತುದಾರರಿಗೆ |

(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು)

**ಐಟಂ–4** **ಕೃಷಿ ವಿಜ್ಞಾನ ಕೇಂದ್ರಗಳ ತಾಂತ್ರಿಕ ಹುದ್ದೆಗಳಿಗೆ ಮರುನಾಮಕರಣ ಮಾಡಲು ಅನುಮೋದನೆ ಕುರಿತು**

ಠರಾವು:

ವಿವರವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿರುವಂತೆ ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಹುದ್ದೆಗಳಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಈ ಕೆಳಗಿನಂತೆ ಸಮಾನರೂಪದ ನಾಮಕರಣವನ್ನು ಮಾಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| Sl.No. | ಪ್ರಸ್ತುತ | ಪರಿಷ್ಕೃತ |
|---|---|---|
| 1 | ಕಾರ್ಯಕ್ರಮ ಸಂಯೋಜಕರು<br>Programme Coordinator | ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು<br>Senior Scientist and Head |
| 2 | ವಿಷಯ ತಜ್ಞರು (ಆಯ್ದ ವಿಷಯ)<br>Subject Matter Specialist (Identified Specialization) | ವಿಜ್ಞಾನಿ (ಆಯ್ದ ವಿಷಯ)<br>Scientist (Identified Specialization) |

**(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು)**

**ಐಟಂ–5** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ ಸಿಬ್ಬಂದಿಯರನ್ನು ತಮ್ಮ ಮೂಲ ಹುದ್ದೆಯನ್ನು ಲೀನ್ ನಲ್ಲಿಟ್ಟು ಕೃವಿವಿ ಧಾರವಾಡಕ್ಕೆ ಎರವಲು ನೀಡಲು ಅನುಮೋದನೆ ಕುರಿತು**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಸಮನ್ವಯ ಸಮಿತಿ ಸಭೆಯ ನಡವಳಿಗಳನ್ನು ಬರುವವರೆಗೆ ಸದರಿ ವಿಷಯವನ್ನು ಮುಂದೂಡಲಾಯಿತು. **(ಕ್ರಮ: ಕುಲಸಚಿವರು)**

**ಐಟಂ–6** **ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರ ವ್ಯವಸ್ಥಾಪಕರಿಗೆ ಉನ್ನತ ವ್ಯಾಸಂಗಕ್ಕಾಗಿ ಅವಕಾಶಗಳನ್ನು ಕಲ್ಪಿಸಲು ಅನುಮೋದನೆ ಕುರಿತು.**

**ಠರಾವು:**

ವಿವರವಾದ ಚರ್ಚೆಯ ನಂತರ, ಕೃಷಿ ವಿಜ್ಞಾನ ಕೇಂದ್ರದ ಕ್ಷೇತ್ರ ವ್ಯವಸ್ಥಾಪಕರುಗಳಿಗೆ ವಿದ್ಯಾರ್ಹತೆಯನ್ನು ಉತ್ತಮಪಡಿಸಿಕೊಳ್ಳಲು ಬಿ.ಎಸ್.ಸಿ.(ಕೃಷಿ) ಯಿಂದ ಎಂ.ಎಸ್.ಸಿ.(ಕೃಷಿ), ಪಿ.ಹೆಚ್.ಡಿ. ಉನ್ನತ ವ್ಯಾಸಂಗಕ್ಕಾಗಿ ವಿದ್ಯಾಭ್ಯಾಸ ರಜೆ / ಪಾರ್ಟ್ ಟೈಂ ಸೌಲಭ್ಯಗಳ ಅವಕಾಶಗಳನ್ನು ಕಲ್ಪಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಅವರು ಒಂದು / ಎರಡು ಸೆಮಿಸ್ಟರುಗಳ ಡೆಪ್ಯೂಟೇಶನ್ ಒದಗಿಸುವ ಕುರಿತು ಸಾಧ್ಯಾಸಾಧ್ಯತೆಗಳ ಗಮನಹರಿಸಲು ಸಲಹೆ ನೀಡಿದರು. **(ಕ್ರಮ: ಕುಲಸಚಿವರು)**

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ /– 5–5–2017

**(ಪಿ.ಎಂ. ಸಾಲಿಮಠ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಸಹಿ /– 5–5–2017

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.